ಬಯಸುತ್ತೇನೆ. ಇವತ್ತು ಸದನದಲ್ಲಿ ಸದಸ್ಯರುಗಳಾದ ತಾವು ಹೇಳಿರತಕ್ಕಂಥ ಸಲಹೆಗಳನ್ನು ಸ್ವೀಕರಿಸಿ ಮುಂದೆ ಈ ರೀತಿಯ ಘಟನೆಗಳು ಮರುಕಳಿಸದೆ ಇರತಕ್ಕಂಥದ್ದಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುವುದರ ಮುಖಾಂತರ, ಹಲವಾರು ದೇಶಗಳಿಂದ ಬಂಡವಾಳವನ್ನು ಹೂಡತಕ್ಕಂಥವರು ಬೆಂಗಳೂರು ನಗರಕ್ಕೆ ಬರತಕ್ಕಂಥ ವ್ಯವಸ್ಥೆ ಏನಿದೆ, ಬೆಂಗಳೂರು ನಗರದ ಬಗ್ಗೆ ವಿದೇಶದ ಗಣ್ಯರಿಗೆ ಕುತೂಹಲ ಇದೆ, ಇಲ್ಲಿ ಒಂದು ಆಕರ್ಷಣೆ ಇರತಕ್ಕಂಥ ಈ ಒಂದು ಸನ್ನಿವೇಶದಲ್ಲಿ, ಮುಂದಿನ ದಿನಗಳಲ್ಲಿ ಪೊಲೀಸ್ ಇಲಾಖೆಯನ್ನು ಉತ್ತಮ ಪಡಿಸತಕ್ಕಂಥದ್ದಕ್ಕೆ, ಅವರ ಕಾರ್ಯನಿರ್ವಹಣೆಯನ್ನು ಸರಿಯಾದ ರೀತಿಯಲ್ಲಿ ಮಾಡತಕ್ಕಂಥದ್ದಕ್ಕೆ ಗಮನಹರಿಸುತ್ತೇನೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ಈ ದಿನಾಂಕ: 6ನೇ ಏಪ್ರಿಲ್ 2006 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ ವಿಧೇಯಕ, 2006.
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ, 2006.
3. ಮೈಸೂರು ಕಾರ್ಮಿಕ ಮತ್ತು ಧರ್ಮಾದಾಯ ಇನಾಂಗಳ ರದ್ಧತಿ ಕರ್ನಾಟಕ (ತಿದ್ದುಪಡಿ) 2005.
4. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2006.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ನಿಯಮ 345ರ ಪ್ರಕಾರ Houseನಲ್ಲಿ ಒಂದು statement ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅರ್ಧ ಗಂಟೆ ಕಾಲಾವಧಿ ಚರ್ಚೆ ರಾಜ್ಯದ ನೀರಾವರಿ ಬಗ್ಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಬಹಳ ಸಮಯ ಆಗಿದೆ.

14. ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಧರಂಸಿಂಗ್‌ರವರು ಬಜೆಟ್ ಮೇಲಿನ ಚರ್ಚೆಯಲ್ಲಿ ಸರ್ಕಾರದ ಬಗ್ಗೆ ವಿಶೇಷವಾದ ಗಮನವನ್ನು ಸೆಳೆಯುವುದರ ಜೊತೆಗೆ ನನಗೆ ಪದೇ ಪದೇ